ಕರ್ನಾಟಕ ವಿಧಾನಸಭೆ

ಬುಧವಾರ 2ನೇ ಫೆಬ್ರವರಿ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ

ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ.

ಅ. ಸದನದಲ್ಲಿ ಸದಸ್ಯರ ಹಾಜರಾತಿಯ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ತಾವು ನಿನ್ನೆ ದಿವಸ ಬೆಳಿಗ್ಗೆ 9 ಗಂಟೆಗೆ ಅಸೆಂಬ್ಲಿಯನ್ನು ಕರೆದಿದ್ದಿರಿ, ನಿನ್ನೆ ಸಹ 9 ಗಂಟೆಗೆ ಅಸೆಂಬ್ಲಿಯನ್ನು ಕರೆದಿದ್ದರೆ ಯಾರೂ ಇರುತ್ತಿರಲಿಲ್ಲ. ಇವತ್ತು ಸಹ ಪರಿಸ್ಥಿತಿ ಹೇಗೆ ಇದೆಯೆಂಬುದನ್ನು ನೋಡಿ. ತಾವು ಇದಕ್ಕೆ ಏನಾದರೂ ಒಂದು ಕಡಿವಾಣವನ್ನು ಹಾಕಬೇಕು. ಇದು ಅನಿವಾರ್ಯ, ಇಲ್ಲದಿದ್ದರೆ ಅಸೆಂಬ್ಲಿಯಲ್ಲಿ ಮಾತನಾಡುವವರಿಗೆ, ಕೇಳುವವರಿಗೆ, ಸ್ಫೂರ್ತಿಬರುವುದಿಲ್ಲ. ತಾವು ಇದಕ್ಕೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಎಲ್ಲಾ ಪಕ್ಷದ ನಾಯಕರು ಇಲ್ಲಿ ಇದ್ದೀರಿ, ಮುಖ್ಯ ಸಚೇತಕರು ಇದ್ದೀರಿ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾಳೆಯಿಂದ ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಸಭೆಯನ್ನು ನಡೆಸಬೇಕೆಂದು ತೀರ್ಮಾನವಾಗಿದೆ. ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ಪಕ್ಷದ ಮುಖ್ಯ ಸಚೇತಕರು, ಸಾಕಷ್ಟು ಸದಸ್ಯರುಗಳು ಸದನಕ್ಕೆ ಬರಬೇಕೆಂದು ಹೇಳಿ, ಎಲ್ಲರನ್ನು ಸಭೆಗೆ ಕರೆದುಕೊಂಡು ಬರತಕ್ಕಂಥದ್ದು ಇದಕ್ಕೆ ನೀವು ವ್ಯವಸ್ಥೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ವಿಷಯ ತೀರ್ಮಾನವಾಗಿದೆ. ಆದರೆ 9 ಗಂಟೆಗೆ ಬರುವಂಥಾದ್ದು ನಿಜಕ್ಕೂ ಕಷ್ಟವಿದೆ.

ಅಧ್ಯಕ್ಷರು : ನೀವು ಬರುವುದಕ್ಕೆ ಆಗದಿದ್ದರೆ, ಬೇರೆಯವರು ಬರುತ್ತಾರೆ ಬಿಡಿ.

ಆ. ಬಾಗಲಕೋಟೆ ಬಿಜಾಪುರ ಜಿಲ್ಲೆಗಳ ಸಮಗ್ರ ನೀರಾವರಿ ಯೋಜನೆ ಪೂರ್ಣಮಾಡಬೇಕೆಂದು ಅಮರಣಾಂತರ ಉಪವಾಸ ಮಾಡುತ್ತಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಎಲ್ಲಾ ಶಾಸಕರುಗಳಿಗೂ ಹೇಳುವಂತಹ ಪ್ರಯತ್ನವನ್ನು ಮಾಡುತ್ತೇವೆ. ಇದರಲ್ಲಿ ಇವತ್ತು ಹೆಚ್ಚು ಸದಸ್ಯರುಗಳು ಭಾಗವಹಿಸಬೇಕಾಗಿದೆ. ನಾವು ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆಯವರೆಗೂ ಕುಳಿತುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇವೆ. ನಾನು ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಜೊತೆಯಲ್ಲೆ ಕರೆದುಕೊಂಡು ಬರುತ್ತೇನೆ. ನಾನು ಭರವಸೆಯನ್ನು ಕೊಡುತ್ತೇನೆ. ಈಗ ಬಹಳ ಮುಖ್ಯವಾಗಿ ತಾವು ಮಾನ್ಯ ಮುಖ್ಯಮಂತ್ರಿಯವರಿಗೆ ಆಲಮಟ್ಟಿಗೆ ಭೇಟಿ ಮಾಡಲು ಹೇಳಿ. ಮಾನ್ಯ ಬಸವನ ಗೌಡರು, ಸಂಸತ್ ಸದಸ್ಯರು ಅವರ ಜೊತೆಗೆ, ಅಲ್ಲಿ ಸಾವಿರಾರು ಜನರು ಅಮರಣಾಂತ ಉಪವಾಸಕ್ಕೆ ಕುಳಿತಿದ್ದಾರೆ. ಅವರ ಅಪೇಕ್ಷೆ ಇರುವಂಥಾದ್ದು, ಹೊಸದಾಗಿ ಏನು

ನಮ್ಮನ್ನು ಉಳಿಸಿ, ಎಂದು ಅವರು ಕೇಳುತ್ತಿದ್ದಾರೆ. ಅಲ್ಲಿ 70–80 ಸಾವಿರ ಜನರು ಪಕ್ಷಭೇದವನ್ನು ಮರೆತು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಲ್ಲಿ ಒಬ್ಬ ಸಂಸತ್ ಸದಸ್ಯರು, ಎಲ್ಲರೂ ಪಕ್ಷಭೇದವನ್ನು ಮರೆತು ಅಮರಣಾಂತ ಉಪವಾಸ ಕುಳಿತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು, ಅವರನ್ನು ಭೇಟಿಮಾಡಿ ಸಮಸ್ಯೆಗಳನ್ನು ಕೇಳಬೇಕು. ಅವರು ಹೊಸದಾಗಿ ಏನೂ ಕೇಳುತ್ತಿಲ್ಲ. ಅವರು ಆಕಾಶದಿಂದ ಚಂದ್ರನನ್ನು ತಂದುಕೊಡಿ, ಎಂದು ಕೇಳುತ್ತಿದ್ದಾರಾ? ನೀವೇ ಪ್ರಾಮಿಸ್ ಮಾಡಿರುವಂತಹ ಬಿಜಾಪುರದ ಯೋಜನೆಯನ್ನು ಪೂರ್ಣಗೊಳಿಸಿ ಕೊಡಿಯೆಂದು ಕೇಳುತ್ತಿದ್ದಾರೆ. ಅಲ್ಲಿ ಅಮರಣಾಂತ ಉಪವಾಸವನ್ನು ಅವರು ಮಾಡುತ್ತಿದ್ದರೆ, ನಾನು ಇಲ್ಲಿ ಹೇಗೆ ಕುಳಿತುಕೊಳ್ಳುವುದು? ತಾವು ಸರ್ಕಾರಕ್ಕೆ ಹೇಳಿ, ಮುಖ್ಯ ಮಂತ್ರಿಯವರಿಗೆ ಹೆಲಿಕಾಪ್ಟರ್ ಇರುವಂಥಾದ್ದಕ್ಕೆ ಹೋಗದೆ ಇನ್ನು ಏನು ಮಾಡುತ್ತೀರಾ?

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಅವರು ಬಂದಮೇಲೆ ಏನು ಮಾಡಬೇಕೆಂಬ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ. ಎಲ್ಲಾ ಊರುಗಳಲ್ಲೂ ಸ್ಟ್ರೈಕ್ ಮಾಡುತ್ತಿದ್ದರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರೇ ಹೋಗಬೇಕೆಂದು ಇಲ್ಲ. ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಹೋಗಿ ನೋಡಿಕೊಂಡು ಬರಲು ಕಳುಹಿಸುತ್ತಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರೆ, ಎಲ್ಲಕ್ಕೂ ಹೋಗ ಬೇಕೆಂದರೆ ಅವರು ಇಲ್ಲಿ ಕುಳಿತುಕೊಳ್ಳುವ ಹಾಗೆ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದು ಮುಖ್ಯವಾದಂತಹ ವಿಚಾರ ವಾಗಿರುವುದರಿಂದ, ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರೇ, ಭರವಸೆಯನ್ನು ಕೊಡಬೇಕು. ಹಣ ಕಾಸಿನ ವಿಷಯಕ್ಕೆ ಸಂಬಂಧಪಟ್ಟಂತೆ, ಇಲ್ಲಿ ಅವರು ಹೊಸದಾಗಿ ಏನು ಕೇಳುತ್ತಿದ್ದಾರೆ ?

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ, ಇದಕ್ಕೆ ನೀರಾವರಿ ಮಂತ್ರಿಗಳು ಇದ್ದಾರೆ. ಅವರು ಹೋಗುತ್ತಾರೆ, ನೀವು ಮಾನ್ಯ ಮುಖ್ಯಮಂತ್ರಿಯವರೇ ಹೋಗಬೇಕು ಅವರೇ ಆಶ್ವಾಸನೆಯನ್ನು ಕೊಟ್ಟರೂ ಅದು ಆಶ್ವಾಸನೆಯಾಗುತ್ತದೆ. ಇಲ್ಲಿ ಮುಖ್ಯಮಂತ್ರಿಯವರು ಕೊಡುವ ಭರವಸೆ ಬೇರೆ, ಮಾನ್ಯ ಮಂತ್ರಿಗಳು ಕೊಡುವ ಭರವಸೆ ಬೇರೆಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಹೇಳುವಂಥಾದ್ದು ಕೋಟ್ಯಾಂತರ ರೂಪಾಯಿಗಳ ವಿಚಾರ, ಈಗ ಪಂಚಾಯತ್‌ನಲ್ಲಿ ಎರಡೂವರೆ ಸಾವಿರ ಕೋಟಿರೂಪಾಯಿಗಳನ್ನು ತೆಗೆದಿಡಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡಿ ಉತ್ತರ ಕೊಡಲಿ. ಅದಕ್ಕೆ ಸ್ವಲ್ಪ ಅವಕಾಶವನ್ನು ಕೊಡಿ. ಸರ್ಕಾರವೂ ಇದಕ್ಕೆ ಸ್ಪಂದಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಈ ಸದನದ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಅವರ ಕಳಕಳಿ ಏನೆಂಬುದನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತರಬೇಕು. ಇದಕ್ಕೆ ಸೂಕ್ತವಾದಂತಹ ನಿರ್ಣಯವನ್ನು ತೆಗೆದುಕೊಳ್ಳುವಂಥಾದ್ದು ಅವರಿಗೆ ಬಿಟ್ಟಿದ್ದು. ಈಗ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿರುವಂತೆ, ನಿಯಮ 69ರ ಮೇಲಿನ ಚರ್ಚೆ ಏನು ಇದೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಅದಕ್ಕೆ ದಯಮಾಡಿ ತಾವುಗಳು ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು : ಈಗ ಈ ಸಭೆಯನ್ನು ನಡೆಸಬೇಕೆಂದು ಇದ್ದಿರೋ, ನಡೆಸಬಾರದು ಎಂದು ಇದ್ದಿರೊ? ಈಗ ಮಾತಾಡುವುದಕ್ಕೆ ಅವಕಾಶ ಇದೆ. ಅದಕ್ಕೆ ಯೋಗ್ಯವಾದ ಉತ್ತರವನ್ನು ಕೊಡುತ್ತಾರೆ.. ದಯಮಾಡಿ ಕುಳಿತುಕೊಳ್ಳಿ, ಸಹಕರಿಸಿ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ : ಮಾನ್ಯ ಅಧ್ಯಕ್ಷರೆ, ಕಳೆದ 15 ದಿವಸಗಳಿಂದ ಹೋರಾಟ ಮಾಡುತ್ತಿದ್ದಾರೆ. ಅಲ್ಲಿಗೆ ಮಾನ್ಯ ಜವಳಿ ಸಚಿವರು ಭೇಟಿ ಕೊಟ್ಟಿದ್ದಾರೆ, ಸಕ್ಕರೆ ಸಚಿವರೂ ಕೂಡ ಸ್ಥಳಕ್ಕೆ ಭೇಟಿ ಕೊಟ್ಟು ರೈತರ ಹೋರಾಟದಲ್ಲಿ ಭಾಗಿಯಾಗಿದ್ದರು.

ಅಧ್ಯಕ್ಷರು : ಮಾನ್ಯ ದೊಡ್ಡನಗೌಡ ಗುಂಡನಗೌಡ ಪಾಟೀಲರೆ, ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಮಾತನಾಡಿ. ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ದಿವಸಗಳಿಂದ ಚಾಮರಾಜ ನಗರದಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅಲ್ಲಿ ನೀರೆತ್ತುವ ಯಂತ್ರ ಕೆಟ್ಟು ಹೋಗಿದೆ. ನನಗೆ ಸರ್ಕಾರ ಭರವಸೆಯನ್ನು ಕೊಡುವವರೆಗೆ ಧರಣಿಯನ್ನು ಮಾಡುತ್ತೇನೆ.

ಇ. ಚಾಮರಾಜನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಒತ್ತಾಯಿಸಿ ಮಾನ್ಯ ವಾಟಾಳ್‌ನಾಗರಾಜ್‌ರವರಿಂದ ಧರಣಿ

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಬಂದು ಧರಣಿಗೆ ಕುಳಿತರು)

ಅಧ್ಯಕ್ಷರು : ನಾನು ನಿಂತಿದ್ದೇನೆ, ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

2. ನಿಯಮ **69ರ ಮೇರೆಗೆ**

ವಿಷಯ:– ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸದಿರುವುದು ಹಾಗೂ ಸತತವಾಗಿ ವಿದ್ಯುತ್ ನೀಡದಿರುವುದರಿಂದ ಉಂಟಾಗಿರುವ ತೊಂದರೆಗಳ ಬಗ್ಗೆ .

ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ಧರಣಿ ವಾಪಸ್ಸು ಪಡೆಯಬೇಕು.